DECCAN HERALD 3

Thursday, August 2, 2018




The heart failure treatment clinic was inaugurated at KMC, Manipal on Wednesday. KMC Hospitals CEO C G Muthanna, Medical Superintendent Dr Avinash and others were present. The clinic functions from Monday to Wednesday from 2.30 pm to 4.30 pm.

THE NEW INDIAN EXPRESS
THURSDAY 02.08.2018

# Clinics for heart treatment opened in Manipal, M'luru

Udupi: The Heart Failure Clinic at Kasturba Hospital, Manipal was inaugurated by C G Muthana, Chief Operating Officer-Teaching Hospitals of Manipal Health Enterprises Private Limited. This clinic at Kasturba Hospital, Manipal will function from Monday to Wednesday from 2.30 pm to 4.30 pm. Special subsidised screening package for the patients is available at the Heart Failure Clinic. Simultaneously, Heart Transplantation Clinic was launched at KMC Hospital, B R Ambedkar Circle, Mangaluru and it will function on all Wednesdays from 1.30 pm to 4.30 pm. Inaugurating the Heart Failure Clinic, Chief Operating Officer - Teaching Hospitals Manipal Health Enterprises C G Muthana said: "Heart failure occurs when heart muscle is weak and cannot pump enough blood for oxygen supply". Approaching Heart Failure Clinic will enable patients to obtain proper guidance from experts and thereby lead healthier life. Heart Failure Clinics in developed countries are known to improve the treatment outcome among patients. Heart Failure Clinic at Kasturba Hospital, Manipal will offer personalised care for patients in a safe environment.

### ಮಣಿಪಾಲದ ಕಸ್ತೂರ ಬಾ, ಮಂಗಳೂರಿನ ಕೆಎಂಸಿ ಆಸ್ಪತ್ರೆಯಲ್ಲಿ ಸೇವೆ ಲಭ್ಯ

# ಹೃದಯ ವೈಫಲ್ಯ ಚಿಕಿತ್ಸಾಲಯ ಉದ್ಘಾಟನೆ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಸಕಾಲದಲ್ಲಿ ಆರೋಗ್ಯ ಚಿಕಿತ್ಸೆ ಮಾಡಿಸಿಕೊಳ್ಳಿ
- ದೀರ್ಘಕಾಲದ ಜೀವನ ಸುಖಮಯವಾಗಿರಬೇಕು
- ಮಂಗಳೂರಿನ ಕೆಎಂಸಿ ಆಸ್ಪತ್ರೆಯಲ್ಲಿ ಹೃದಯ ಕಸಿ

ಉಡುಪಿ: ಮಣಿಪಾಲದ ಕಸ್ತೂರ ಬಾ ಆಸ್ಪತ್ರೆಯಲ್ಲಿ ಬುಧವಾರ ನೂತನ ಹೃದಯ ವೈಫಲ್ಯ ಚಿಕಿತ್ಸಾಲಯವನ್ನು ಮಣಿಪಾಲ ಬೋಧಕ ಆಸ್ಪತ್ರೆ ಸಮೂಹಗಳ ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ.ಮುತ್ತಣ್ಣ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ಹೃದಯದ ಸ್ನಾಯು ದುರ್ಬಲ ಗೊಂಡಾಗ ಆಮ್ಲಜನಕ ಪೂರೈಕೆಗೆ ಸಾಕಾಗುವಷ್ಟು ರಕ್ತವನ್ನು ಪಂಪ್ ಮಾಡಲು ಸಾಧ್ಯವಾಗದೆ ಹೃದಯ ವೈಫಲ್ಯ ಸಂಭವಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸಾವು ಸಂಭವಿಸುತ್ತದೆ. ಹೃದಯ ವೈಫಲ್ಯ ಚಿಕಿತ್ಸಾಲಯದಲ್ಲಿ ಹೃದ್ರೋಗಿಗಳಿಗೆ ವಿಶೇಷ ತಜ್ಞರಿಂದ ಸೂಕ್ತ ಮಾರ್ಗದರ್ಶನ ನೀಡಲಾಗುವುದು. ಇಲ್ಲಿ ಚಿಕಿತ್ಸೆ ಪಡೆಯುವ ಮೂಲಕ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಬಹುದು ಎಂದರು.

ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಹೃದಯ ವೈಫಲ್ಯ ಚಿಕಿತ್ಸಾಲಯಗಳು ಹೆಚ್ಚು ಪ್ರಸಿದ್ಧಿ ಪಡೆದಿವೆ. ಜತೆಗೆ, ರೋಗಿಗಳಲ್ಲಿ ಉತ್ತಮ ಫಲಿತಾಂಶವೂ ದೊರೆಯುತ್ತಿದೆ. ಮಣಿಪಾಲದ ಕಸ್ತೂರ ಬಾ ಆಸ್ಪತ್ರೆಯಲ್ಲಿನ ಹೃದಯ ವೈಫಲ್ಯ ಚಿಕಿತ್ಸಾಲಯ ಕೂಡ ಗುಣಮಟ್ಟದ ಸೇವೆ ದೊರೆಯಲಿದ್ದು, ಸುರಕ್ಷಿತ ವಾತಾವರಣದಲ್ಲಿ ರೋಗಿಗಳ ವೈಯಕ್ತಿಕ ಆರೈಕೆ ಮಾಡಲಾಗುವುದು ಎಂದರು.

ಹೃದಯ ವೈಫಲ್ಯ ಚಿಕಿತ್ಸಾಲಯವು ಸೋಮವಾರದಿಂದ ಬುಧವಾರದವರೆಗೂ ಮಧ್ಯಾಹ್ನ 2.30ರಿಂದ ಸಂಜೆ 4.30ರವರೆಗೆ ತೆರೆದಿರುತ್ತದೆ. ವಿಶೇಷ ರಿಯಾಯಿತಿ ತಪಾಸಣಾ ಪ್ಯಾಕೇಜ್ ಸಹ ಲಭ್ಯವಿದೆ. ಮಂಗಳೂರಿನ ಕೆಎಂಸಿ ಆಸ್ಪತ್ರೆಯಲ್ಲಿ ಹೃದಯ ಕಸಿ ಚಿಕಿತ್ಸಾಲಯವನ್ನು ಆರಂಭಿಸಲಾಗಿದೆ. ಪ್ರತಿ ಬುಧವಾರ ಮಧ್ಯಾಹ್ನ 1.30ರಿಂದ 4.30ರವರೆಗೆ ಸೇವೆ ದೊರೆಯಲಿದೆ. ಇದರ ಪ್ರಯೋಜನ ಪಡೆದುಕೊಳ್ಳಬಹುದು ಎಂದರು.




ಮಣಿಪಾಲದ ಕಸ್ತೂರ ಬಾ ಆಸ್ಪತ್ರೆಯಲ್ಲಿ ಬುಧವಾರ ನೂತನ ಹೃದಯ ವೈಫಲ್ಯ ಚಿಕಿತ್ಸಾಲಯವನ್ನು ಉದ್ಘಾಟಿಸಲಾಯಿತು

ಮಣಿಪಾಲದ ವೈದ್ಯಕೀಯ ಅಧೀಕ್ಷಕರಾದ ಡಾ.ಅವಿನಾಶ ಶೆಟ್ಟಿ ಮಾತನಾಡಿ, 'ಕೊನೆಯ ಹಂತದ ಹೃದಯ ವೈಫಲ್ಯ ರೋಗಿಗಳಿಗೆ ಹಾಗೂ ಕಾರ್ಡಿಯಾಕ್ ಅಸಿಸ್ಟೆಡ್ ಸಾಧನಗಳ ಅಳವಡಿಕೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸುತ್ತಿರುವ ರೋಗಿಗಳಿಗೆ ಹೃದಯ ವೈಫಲ್ಯ ಚಿಕಿತ್ಸಾಲಯದಲ್ಲಿ ಸಮಗ್ರ ಆರೈಕೆ ದೊರೆಯುತ್ತದೆ. ಸೈಟೋಟಾಕ್ಸಿಕ್ ಔಷಧಿಗಳಿಂದ ಹೃದಯ ವೈಫಲ್ಯಕ್ಕೊಳಗಾದ ರೋಗಿಗಳಿಗೂ ಇಲ್ಲಿ ಚಿಕಿತ್ಸೆ ದೊರೆಯಲಿದೆ ಎಂದರು.

ಮಣಿಪಾಲದ ಕಸ್ತೂರ ಬಾ ಆಸ್ಪತ್ರೆಯ ಇಂಟರ್ವೆನ್ಷನಲ್ ಕಾರ್ಡಿಯಾಲಜಿ ವಿಭಾಗದ ಮುಖ್ಯಸ್ಥ ಡಾ.ಟಾಮ್ ದೇವಸಿಯಾ ಮಾತನಾಡಿ, 'ಹೃದಯ ವೈಫಲ್ಯ ಚಿಕಿತ್ಸಾಲಯದಲ್ಲಿ ಸಕಾಲದಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳಿಗೆ ಸ್ಪಷ್ಟ ಚಿತ್ರಣ ಸಿಗುತ್ತದೆ. ಇದರಿಂದಾಗಿ ದೀರ್ಘಕಾಲದವರೆಗೂ ಜೀವನ ನಡೆಸಬಹುದು. ಜತೆಗೆ ಹೃದಯ ದಾನಿಗಳು ಲಭ್ಯವಾದ ಕೂಡಲೇ ಹೃದಯ ಕಸಿ ಮಾಡಿಸಿಕೊಳ್ಳುವ ಅವಕಾಶವನ್ನು ಒದಗಿಸಲಾಗುವುದು ಎಂದರು.

MANGALURU · THE HINDU
THURSDAY, AUGUST 2, 2018

# Heart clinic opened

MANIPAL

The Heart Failure Clinic was inaugurated at Kasturba Hospital, Manipal by C.G. Muthana Chief Operating Officer– Teaching Hospitals of Manipal Health Enterprises Pvt. Ltd., here on Wednesday. According to a release issued here, the Heart Failure Clinic at the Kasturba Hospital here would function from 2.30 p.m. to 4.30 p.m. from Monday to Wednesday. For details, call: 0820-2922686.

2-8-2018 ಉದಯವಾಣಿ
UDAYAVANI - MANIPAL

# ಮಣಿಪಾಲ, ಮಂಗಳೂರಿನಲ್ಲಿ ಹೃದಯ ಸ್ತಂಭನ ಚಿಕಿತ್ಸಾಲಯ ಸೇವೆ




ಹೃದಯ ಸ್ತಂಭನ ಚಿಕಿತ್ಸಾಲಯವನ್ನು ಸಿ. ಜಿ. ಮುತ್ತಣ ಉದ್ಘಾಟಿಸಿದರು.

ಉಡುಪಿ/ಮಂಗಳೂರು, ಆ. 1: ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ಹೃದಯ ಸ್ತಂಭನ ಚಿಕಿತ್ಸಾಲಯವನ್ನು ಮಣಿಪಾಲ ಆಸ್ಪತ್ರೆ ಸಮೂಹಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ ಸಿ.ಜಿ. ಮುತ್ತಣ ಉದ್ಘಾಟಿಸಿದರು.

ಮಣಿಪಾಲ ಆಸ್ಪತ್ರೆಯ ಹೃದಯ ಸ್ತಂಭನ ಚಿಕಿತ್ಸಾಲಯವು ಸೋಮವಾರದಿಂದ ಬುಧವಾರ ಅಪರಾಹ್ನ 2.30ರಿಂದ ಸಂಜೆ 4.30ರ ವರೆಗೆ ಕಾರ್ಯಾಚರಿಸಲಿದೆ. ರೋಗಿಗಳಿಗೆ ವಿಶೇಷ ರಿಯಾಯಿತಿಯ ತಪಾಸಣಾ ಪ್ಯಾಕೇಜ್ ಲಭ್ಯವಿದೆ. ಮಂಗಳೂರಿನ ಕೆಎಂಸಿ ಆಸ್ಪತ್ರೆಯಲ್ಲಿ ಹೃದಯ ಕಸಿ ಚಿಕಿತ್ಸಾಲಯ ಆರಂಭಿಸಲಾಗಿದೆ ಇದು ಎಲ್ಲ ಬುಧವಾರ ಅಪರಾಹ್ನ 1.30ರಿಂದ 4.30ರ ವರೆಗೆ ಕಾರ್ಯಾಚರಿಸಲಿದೆ.

ಹೃದಯದ ಸ್ನಾಯು ದುರ್ಬಲಗೊಂಡಾಗ ಆಮ್ಲಜನಕ ಪೂರೈಕೆಗೆ ಸಾಕಾಗುವಷ್ಟು ರಕ್ತವನ್ನು ಪಂಪ್ ಮಾಡಲು ಆಗದಿರುವಾಗ ಹೃದಯ ಸ್ತಂಭನ ಸಂಭವಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಬದುಕುವುದು ಅಸಾಧ್ಯವಾಗಿದ್ದರೂ ಹೃದಯ ಸ್ತಂಭನ ಚಿಕಿತ್ಸಾಲಯಕ್ಕೆ ರೋಗಿಯನ್ನು ಒಯ್ಯುವುದರಿಂದ ವಿಶೇಷಜ್ಞರಿಂದ ಸೂಕ್ತ ಮಾರ್ಗದರ್ಶನ ಪಡೆಯಬಹುದು ಮತ್ತು ಜೀವನ ಗುಣಮಟ್ಟವನ್ನು ಸುಧಾರಿಸಿಕೊಳ್ಳಬಹುದು. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಹೃದಯ ಸ್ತಂಭನ ಚಿಕಿತ್ಸಾಲಯಗಳು ರೋಗಿಗಳಲ್ಲಿ ಚಿಕಿತ್ಸೆಯ ಫಲಿತಾಂಶವನ್ನು ಹೆಚ್ಚಿಸುತ್ತವೆ. ಮಣಿಪಾಲ ಚಿಕಿತ್ಸಾಲಯ ಸುರಕ್ಷಿತ ವಾತಾವರಣದಲ್ಲಿ ವೈಯಕ್ತಿಕ ಆರೈಕೆಯನ್ನು ಒದಗಿಸುತ್ತದೆ ಎಂದು ಮುತ್ತಣ ಹೇಳಿದರು.

ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ| ಅವಿನಾಶ ಶೆಟ್ಟಿಯವರು, ಕೊನೆಯ ಹಂತದ ಹೃದಯ ಸ್ತಂಭನ ರೋಗಿಗಳಿಗೆ, ಎಡಹೃತ್ಕುಕ್ಷಿಯ ಕಾರ್ಯನ್ಯೂನತೆ ಇರುವ ರೋಗಿಗಳಿಗೆ ಅಥವಾ ಕಾರ್ಡಿಯಾಕ್ ಅಸಿಸ್ಟ್ ಸಾಧನಗಳ ಅಳವಡಿಕೆಗೆ ಸಂಬಂಧಿಸಿದ ಸಮಸ್ಯೆಗಳಿರುವವರಲ್ಲಿ ಹೃದಯ ಸ್ತಂಭನ ಚಿಕಿತ್ಸಾಲಯ ಸಮಗ್ರ ಆರೈಕೆ ಒದಗಿಸುತ್ತದೆ ಎಂದು ಹೇಳಿದರು. ಸ್ಟೆಟೋಟಾಕ್ಸಿಕ್ ಔಷಧಗಳಿಂದ ಹೃದಯ ಸ್ತಂಭನಕ್ಕೊಳಗಾದ ರೋಗಿಗಳಿಗೆ ಚಿಕಿತ್ಸಾಲಯದಲ್ಲಿ ಉಪಚಾರ ಕೈಗೊಳ್ಳಲಾಗುವುದು ಎಂದರು.

## ಸುದೀರ್ಘ ಜೀವನ

ಮಣಿಪಾಲ ಆಸ್ಪತ್ರೆಯ ಇಂಟರ್ವೆನ್ಷನಲ್ ಕಾರ್ಡಿಯಾಲಜಿ ವಿಭಾಗದ ಮುಖ್ಯಸ್ಥ ಡಾ| ಟಾಮ್ ದೇವಾಸಿಯ ಅವರ ಅಭಿಪ್ರಾಯದಂತೆ, ಹೃದಯ ಸ್ತಂಭನ ಚಿಕಿತ್ಸಾಲಯದಲ್ಲಿ ಸಕಾಲದಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳು ತಮ್ಮ ಸ್ಥಿತಿಯ ಸ್ಪಷ್ಟ ಚಿತ್ರಣ ಪಡೆಯುವ ಸೌಲಭ್ಯ ಹೊಂದಿರುತ್ತಾರೆ ಮತ್ತು ಆ ಮೂಲಕ ದೀರ್ಘ ಸಮಯದವರೆಗೆ ಉತ್ತಮ ಗುಣಮಟ್ಟದ ಜೀವನ ನಡೆಸಬಲ್ಲರು. ಹೃದಯ ಕಸಿಗೆ ಅರ್ಹರಾದ ರೋಗಿಗಳು ಹೃದಯ ದಾನಿಗಳು ಲಭ್ಯವಾದಾಗಲೆಲ್ಲ, ಹೃದಯ ಕಸಿ ಮಾಡಿಸಿಕೊಳ್ಳುವ ಹೆಚ್ಚಿನ ಅವಕಾಶ ಪಡೆಯುತ್ತಾರೆ.

ವಾರ್ತಾ ಭಾರತಿ

ಮಂಗಳೂರು | ಗುರುವಾರ ಆಗಸ್ಟ್ 2, 2018

# ಮಂಗಳೂರು, ಮಣಿಪಾಲ ಕೆಎಂಸಿಯಲ್ಲಿ ಹೃದಯ ವೈಫಲ್ಯ ಚಿಕಿತ್ಸಾಲಯ ಸೇವೆ ಆರಂಭ

ಮಣಿಪಾಲ, ಆ.1: ಮಣಿಪಾಲ ಮತ್ತು ಮಂಗಳೂರು ಕಸ್ತೂರ್ಬಾ ಆಸ್ಪತ್ರೆಗಳಲ್ಲಿ ಹೃದಯ ವೈಫಲ್ಯ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲಾಗಿದೆ. ಮಣಿಪಾಲ ಕೆಎಂಸಿಯಲ್ಲಿ ಇಂದು ಮಣಿಪಾಲ ಬೋಧಕ ಆಸ್ಪತ್ರೆ ಸಮೂಹಗಳ ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ.ಮುತ್ತಣ್ಣ ಚಿಕಿತ್ಸಾಲಯವನ್ನು ಉದ್ಘಾಟಿಸಿದರು.

ಕೆಎಂಸಿ ಮಣಿಪಾಲದ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ಮಾತನಾಡಿ, ಸೈಟೋಟಾಕ್ಸಿಕ್ ಔಷಧಿಗಳಿಂದ ಹೃದಯ ವೈಫಲ್ಯಕ್ಕೊಳಗಾದ ರೋಗಿಗಳಿಗೆ ಚಿಕಿತ್ಸಾಲಯದಲ್ಲಿ ಚಿಕಿತ್ಸೆ ನೀಡಲಾಗುತ್ತದೆ ಎಂದರು.




ಮಣಿಪಾಲ ಕೆಎಂಸಿಯ ಇಂಟರ್ವೆನ್ಷನಲ್ ಕಾರ್ಡಿಯಾಲಜಿ ವಿಭಾಗದ ಮುಖ್ಯಸ್ಥ ಡಾ.ಟಾಮ್ ದೇವಸಿಯಾ ಉಪಸ್ಥಿತರಿದ್ದರು.

ಈ ಚಿಕಿತ್ಸಾಲಯವು ಸೋಮವಾರದಿಂದ ಬುಧವಾರದವರೆಗೆ ಅಪರಾಹ್ನ 2:30ರಿಂದ ಸಂಜೆ 4:30ರವರೆಗೆ ಕಾರ್ಯಾಚರಿಸಲಿದೆ. ಮಂಗಳೂರು ಚಿಕಿತ್ಸಾಲಯವು ಪ್ರತಿ ಬುಧವಾರದಂದು ಮಧ್ಯಾಹ್ನ 1:30ರಿಂದ ಸಂಜೆ 4:30ರವರೆಗೆ ಕಾರ್ಯಾಚರಿಸಲಿದೆ. ಹೃದಯ ವೈಫಲ್ಯ ಚಿಕಿತ್ಸಾಲಯದಲ್ಲಿ ರೋಗಿಗಳ ತಪಾಸಣೆಗೆ ವಿಶೇಷ ರಿಯಾಯಿತಿಯನ್ನೂ ನೀಡಲಾಗುವುದು ಎಂದು ಆಸ್ಪತ್ರೆಯ ಪ್ರಕಟನೆಯಲ್ಲಿ ತಿಳಿಸಲಾಗಿದೆ.